

ಏನಾದ್ರೂ ಹಣ್ಣು ಮತ್ತೊಂದು ಕೊಟ್ಟು ಹೋಗ್ತಾರೆ. ನಾನು ಬೇಕಾದಷ್ಟು ದುಡ್ಡು ಮಾಡಿದ್ದೀನೀಂತ ಯಾವುದೋ ಪತ್ರಿಕೇಲಿ ಬರೆದಿದ್ದನ್ನ ಮಗಳು ಚೆನ್ನಮ್ಮಾನೂ ಓದಿದ್ದಳೂಂತ ಕಾಣ್ತದೆ. ಸಂಕಟ ತಡೀಲಿಕ್ಕಾಗದೆ ಒಂದು ದಿನ 'ಇದೆಲ್ಲ ನಿಜಾನೇನಪ್ಪ' ಅಂತ ಕೇಳಿದ್ಲು. ಅವಳ ಅಮಾಯಕತನ ನೋಡಿ ನಾನು ಸುಮ್ಮನೆ ನಕ್ಕುಬಿಟ್ಟೆ.

'ಅಲ್ಲಾಪ್ಪ ನೀನು ನಾಡನ್ನ ಉಳಿಸ್ತೀನಿ ಹೋರಾಟ ಮಾಡ್ತೀನೀಂತ ಹೋಗಿ ಸರ್ಕಾರಿ ಕೆಲಸ ಬಿಟ್ಟೆ. ನಿನ್ನ ಕೊರಗಲ್ಲೇ ಅಜ್ಜಾನೂ ಸತ್ತುಹೋದ್ರು. ಸಂಘಟನೇಗೇಂತ ಮಾಡಿದ ಸಾಲ ತೀರಿಸೋದಕ್ಕೆ ಅಜ್ಜನ ಮನೇನ ಮಾರಿಬಿಟ್ಟೆ. ಸಾಲದೂಂತ ಕಾಲು ಬೇರೆ ಮುರ್ಕೊಂಡೆ. ಅಮ್ಮ ಆಸ್ಪತ್ರೇಲಿದ್ದಾಗ ಕೈಯಲ್ಲಿ ಬಿಡಿಗಾಸೂ ಇಲ್ಲದೆ ಅಮ್ಮನ್ನ ಶಾಶ್ವತವಾಗಿ ಕಳ್ಕೋಬೇಕಾಯ್ತು. ನೀನು ಹೀಗೆ ಕುಂಟ್ಕೊಂಡು ಕೋರ್ಟಿಗೆ ಅಲೀತಿರ್ತೀಯ. ನಿನ್ನ ಮಕ್ಕಳು ಮೊಮ್ಮಕ್ಕಳು ಗತಿಗೆಟ್ಟವರಂಗೆ ಬದುಕ್ತಿದ್ದೀವಿ. ಒಂದು ಕಾಲದಲ್ಲಿ ಎಷ್ಟೆಲ್ಲ ಖ್ಯಾತಿಯಿತ್ತು ನಿಂಗೆ. ಇವತ್ತು ನಿನ್ನನ್ನ ಯಾವೂರು ದಾಸ ಅಂತ ಕೇಳೋರಿಲ್ಲ. ಇವರಿಗೆ ಹೇಗಪ್ಪಾ ಮನಸಾಗುತ್ತೆ ಹೀಗೆಲ್ಲ ಬರಿಯೋದಿಕ್ಕೆ' ಎಂದಿದ್ದಳು.